**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ29-01-2026**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಪಿ ಎಂ ವಕೀಲರಿಂದಃ**

ನಾನು ಕೃಷಿ ಕೆಲಸ ಮಾಡುತ್ತೇನೆ. ನನಗೆ ಮೂರುವರೆ ಎಕರೆ ಕಾಫಿ ತೋಟ ಇರುತ್ತದೆ. ಸದರಿ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆ. ನನಗೆ ಒಬ್ಬ ಸಹೋದರ ಇದ್ದು, ನಮ್ಮ ನಡುವೆ 2023 ರಲ್ಲಿ ವಿಭಾಗವಾಗಿರುತ್ತದೆ. ಅದಕ್ಕೂ ಮೊದಲು ಎಲ್ಲ ಆಸ್ತಿ ನನ್ನ ಹೆಸರಿನಲ್ಲಿ ಇತ್ತು. ನನ್ನ ಸಹೋದರನಿಗೆ ಮೂರುವರೆ ಎಕರೆ ಹೋಗಿರುತ್ತದೆ. ನನಗೆ ವಾರ್ಷಿಕ 10-12 ಲಕ್ಷ ಆದಾಯ ಇರುತ್ತದೆ. ಆರೋಪಿ ನನಗೆ 2019 ರಿಂದ ಪರಿಚಯ ಇರುತ್ತಾರೆ. ಆರೋಪಿ ಶನಿವಾರಸಂತೆಯಲ್ಲಿ ವಸ್ತುಗಳ ಮಾರಾಟ ಮಾಡುವಾಗ ಪರಿಚಯವಾಗಿರುತ್ತಾರೆ. 2019 ರ ಮೊದಲು ಅವರು ಪರಿಚಯವಿರುವುದಿಲ್ಲ. ನಾನು ಈ ಪ್ರಕರಣ ಹೊರತುಪಡಿಸಿ ಬೇರೆ ಪ್ರಕರಣ ಹಾಕಿರುವುದಿಲ್ಲ. ಆರೋಪಿ ಹಾಸನದಲ್ಲಿ ಗವೇನಹಳ್ಳಿ ಮಠದ ಬಳಿ ವಾಸ ಇರುತ್ತಾರೆ. ಯಾವ ಬಡವಣೆ ಎಂದು ಗೊತ್ತಿಲ್ಲ. ಆರೋಪಿಯ ತಂದೆ ಹೆಸರು ಮತ್ತು ಅವರ ಕುಟುಂಬದ ಬಗ್ಗೆ ಗೊತ್ತಿಲ್ಲ.

ಆರೋಪಿ ಏನು ಕೆಲಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಆದರೆ ಆಯುರ್ವೇದಿಕ್ ಪ್ರಾಡೆಕ್ಟಗಳನ್ನು ವ್ಯಾಪಾರ ಮಾಡುತ್ತಿದ್ದರು. ಅವರು ಮನೆ ಮತ್ತು ಅಂಗಡಿ ಒಂದೇ ಕಡೆ ಇತ್ತು. ಅಂಗಡಿಯ ಹೆಸರು ಇರಲಿಲ್ಲ. ಆರೋಪಿ ಮಹಾವೀರ್ ಮೆಟೇಲ್ಸ ಕಂಪನಿಯಿಂದ ಪರವಾನಗಿ ಪಡೆದು ಮೈಲೈಫ್ ಎಂಬ ಆಯುರ್ವೇದಿಕ್ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದರು. ಮಳಿಗೆಗೆ ಪರವಾನಗಿ ಪಡೆದಿರುವ ಬಗ್ಗೆ ಗೊತ್ತಿಲ್ಲ. ಆರೋಪಿ ಹರ್ಬಲ್ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದರು. ಆದರೆ ಅವುಗಳ ಹೆಸರು ಗೊತ್ತಿಲ್ಲ. ಆರೋಪಿ ಸದರಿ ಉತ್ಪನ್ನಗಳನ್ನು ವ್ಯಾಪಾರ ಮಾಡಿದರೆ ಲಾಭವಾಗುತ್ತದೆ ಎಂದು ಹೇಳಿ ನನ್ನನ್ನು ದಿಃ 10.08. 2019 ರಲ್ಲಿ ಸೇರಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ರಶೀದ್ ಅಹಮ್ಮದ್, ವಿಜಯ ಕುಮಾರ ಮತ್ತು ಬಶೀದ್ ರವರು ಸಹ ಇದ್ದರು. ರಶೀದ್ ಅಹಮ್ಮದ್ ಶನಿವಾರಸಂತೆ ಸರ್ಕಾರಿ ಆಸ್ಪತ್ರೆಯಲ್ಲಿ ಲ್ಯಾಬ್ ಟೇಕನಿಷಿಯನ್ ಆಗಿದ್ದರು. ಬಶೀದ್ ರವರು ಚಂಗಡಿಹಳ್ಳಿಯಲ್ಲಿ ಶಿಕ್ಷಕರಾಗಿರುತ್ತಾರೆ. ವಿಜಯ ಕುಮಾರ ರವರು ಶನಿವಾರಸಂತೆಯಲ್ಲಿ ಕೃಷಿ ಮಾಡುತ್ತಾರೆ.

ಸದರಿಯವರು ಸಹ ವ್ಯಾಪಾರ ಮಾಡಿರುತ್ತಾರೆ. ಸದರಿ ಮೂರು ಜನರು ಸಹ ಆರೋಪಿ ಜೊತೆ ಬಾಯಿ ಮಾತಿನಲ್ಲಿ ವ್ಯಾಪಾರ ಮಾಡಲು ಒಪ್ಪಿರುತ್ತಾರೆ. ವಿಜಯಕುಮಾರ ರವರು ಆರೋಪಿಗೆ 3 ಲಕ್ಷ ಕೊಟ್ಟಿರುತ್ತಾರೆ. ಬಶೀದ್ ರವರು ನನಗಿಂತ 2 ವರ್ಷದ ಮೊದಲೇ ಹಣ ನೀಡಿರುತ್ತಾರೆ. ರಶೀದ್ ರವರು ಯಾವುದೇ ಹಣ ನೀಡಿಲ್ಲ. ರಶೀದ್ ಮತ್ತು ಅವರ ಹೆಂಡತಿ ಸೇರಿ ವ್ಯಾಪಾರ ಮಾಡಿರುತ್ತಾರೆ. ನಾನು ಆರೋಪಿಗೆ ದಿಃ 13.08.2019 ರಂದು ಬ್ಯಾಂಕ್ ಮೂಲಕ ಹಣ ನೀಡಿರುತ್ತೇನೆ. ನಾನು ಆರೋಪಿಗೆ ಒಂದೇ ಕಂತಿನಲ್ಲಿ ರೂ 3,50,000/- ನೀಡಿರುತ್ತೇನೆ. ನಾನು ನನ್ನ ಬ್ಯಾಂಕ್ ಆಫ್ ಬರೋಡ ಬ್ಯಾಂಕ್ ನಿಂದ ಹಣ ಪಡೆದು ಆರೋಪಿಯ ಕಾರ್ಪೋರೇಷನ್ ಬ್ಯಾಂಕ್, ಹಾಸನ ಶಾಖೆ ಖಾತೆಗೆ ನಾನೇ ಖುದ್ದು ಹೋಗಿ ಜಮಾ ಮಾಡಿರುತ್ತೇನೆ.

ನಾನು ಆಗಸ್ಟ ಮೊದಲ ವಾರ 2019 ರಲ್ಲಿ ನನ್ನ ಬ್ಯಾಂಕ್ ನಿಂದ ಕೃಷಿ ಸಾಲ ಎಂದು ಸಾಲ ಪಡೆದಿರುತ್ತೇನೆ. ಅದರ ಹಿಂದೆ ಸಾಲ ಪಡೆದಿದ್ದು ಅದನ್ನು ತೀರಿಸಿರುತ್ತೇನೆ. ನನ್ನ ಜಮೀನುಗಳಿಗೆ 20 ವರ್ಷಗಳಿಂದ ಸಾಲ ಪಡೆದಿರುತ್ತೇನೆ. ಹಣ ನೀಡುವ ಮೊದಲು ಆರೋಪಿಯೊಂದಿಗೆ ಯಾವುದೇ ಕರಾರು ಮಾಡಿಕೊಂಡಿರುವುದಿಲ್ಲ. ನಾನು ಹಣ ಪಾವತಿ ಮಾಡಿದ ದಿನದಿಂದಲೇ ಆರೋಪಿ ನನಗೆ ಪ್ರಾಡೆಕ್ಟ ಗಳನ್ನು ನೀಡಿರುತ್ತಾರೆ. 2 ತಿಂಗಳು ಮಾತ್ರ ನನಗೆ ಪ್ರಾಡೇಕ್ಟ ಗಳನ್ನು 2 ಬಾರಿ ನೀಡಿರುತ್ತಾರೆ. ಪ್ರಾಡೆಕ್ಟ ತರುವಾಗ ತಲಾ 1 ಸಾವಿರದಂತೆ 2 ಬಾರಿ ಒಟ್ಟು 2 ಸಾವಿರ ನೀಡಿರುತ್ತೇನೆ. ನಮಗೆ ಜಾಸ್ತಿ ಪ್ರಾಡೆಕ್ಟ್ ಕೊಟ್ಟಾಗ ಬೇರೆಯವರಿಗೂ ಮಾರಾಟ ಮಾಡುತ್ತೇವೆ. ಆದರೆ ಆರೋಪಿ ನನಗೆ ಜಾಸ್ತಿ ಉತ್ಪನ್ನಗಳನ್ನು ನೀಡಿರುವುದಿಲ್ಲ. 2 ಬಾರಿ ಹೋದಾಗ ರಶೀದಿ ಪಡೆದಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

ಆರೋಪಿ ಸೆಪ್ಟಂಬರ್ 2019 ರಿಂದಲೂ ಉತ್ಪನ್ನಗಳನ್ನು ನೀಡಿರುವುದಿಲ್ಲ. ಆಗ ನಾನು ಉತ್ಪನ್ನಗಳನ್ನು ಅಥವಾ ಹಣವನ್ನು ವಾಪಸ್ಸು ಕೊಡುವಂತೆ ಮೌಖಿಕವಾಗಿ ಕೇಳಿರುತ್ತೇನೆ. ಆದರೆ ಲಿಖಿತವಾಗಿ ಕೇಳಿಲ್ಲ. ಫೋನ್ ಮೂಲಕ ಮೆಸೇಜ್ ಹಾಕಿಲ್ಲ. ನಾನು 2021 ರವರೆಗೂ ನಾನು ಆರೋಪಿಯನ್ನು ಕೇಳಿರುತ್ತೇನೆ. ಆಗ ದಿಃ 05.04.2021 ರಂದು ಆರೋಪಿ 2 ಕಂತಿನಲ್ಲಿ ಹಣ ಮರುಪಾವತಿ ಮಾಡುವುದಾಗಿ ಹೇಳಿ 2 ಚೆಕ್ ನೀಡಿರುತ್ತಾರೆ. ಆರೋಪಿ ಚೆಕ್ ಗಳಿಗೆ ಸಹಿ ಮಾಡಿ ಖಾಲಿ ಚೆಕ್ ನ್ನು ನೀಡಿರುತ್ತಾರೆ. 2 ಚೆಕ್ ಗಳಿಗೆ ಒಂದೇ ದಿನಾಂಕ ನಮೂದು ಮಾಡಿರುತ್ತಾರೆ. ಆರೋಪಿ ಹಂತ ಹಂತವಾಗಿ ಕೊಡುತ್ತೇನೆಂದು ಹೇಳಿದ್ದರಿಂದ 2 ಚೆಕ್ ಗಳನ್ನು ನೀಡಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಮರುವಿಚಾರಣೆಃ ಇಲ್ಲ**

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**ಓ ಹೆ ಕೇ ಸ ಇ**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**